

ಇದ್ದು ಅವ್ವನಿಗೆ ಸಹಾಯಕಿಯಾದಳು. ಯಾಕೋ ಗೊತ್ತಿಲ್ಲ, ಅಕ್ಕನನ್ನು ಅವ್ವ ಓದಿಸಲಿಲ್ಲ. ತಂಗಿ ನಮ್ಮೂರಿನಿಂದ ಬಿ.ಎಡ್. ಮಾಡಿದ ಮೊದಲ ಮಗಳು. ಹೆಣ್ಣುಮಕ್ಕಳನ್ನು ತನ್ನ ಕಣ್ಣಳತೆಯಲ್ಲಿಯೇ ಪೋಷಿಸಿದಳು. ಅವ್ವ ಸಂಸಾರದ ಜೊತೆಗೆ ಮಕ್ಕಳ ಸಂಸ್ಕಾರಕ್ಕೆ ಮಾದರಿ ಶಿಕ್ಷಕಿಯಾದಳು. ಹೊರಗಿನ ಪ್ರಪಂಚಕ್ಕೆ ಅಪ್ಪನೇ ಮನೆಯ ಕರ್ತೃ ಅನಿಸಿದರೂ ಅವ್ವನೇ ನಿಜವಾದ ಮನೆಯ ಕರ್ತೃ. ಅಪ್ಪನಿಗೆ ಹೆಚ್ಚು ತೊಂದರೆಯಾಗಬಾರದೆಂಬುದು ಅವ್ವನ ಕಾಳಜಿ. ಸಂಸಾರದ ಪೂರ್ಣ ಜವಾಬ್ದಾರಿಯ ನೊಗವನ್ನು ಒಬ್ಬಳೇ ಹೊತ್ತಳು.

ಅವ್ವ ದುಡಿದು ನಾದಿನಿಯರಿಬ್ಬರ ಮದುವೆ ಮಾಡಿದಳು ಮತ್ತು ಅವರ ಪಾಲಿನ ಜಮೀನು ಗಳಿಸಿದಳು. ಇದರ ಜೊತೆಗೆ ತಾನು ಕೂಡಿಟ್ಟ ಹಣದಿಂದ ಅಲ್ಪ ಸ್ವಲ್ಪ ಜಮೀನನ್ನು ಖರೀದಿಸಿದಳು. ತಾತನ ಜೊತೆ ಇದ್ದ ಚಿಕ್ಕಪ್ಪ ಮದುವೆಯಾಗಿ ಬೇರೆಯಾದ. ಹೆಣ್ಣುಮಕ್ಕಳಿಬ್ಬರ ಮದುವೆ ನಂತರ ತಾತ ಒಂಟಿಯಾದ. ತಾತನ ಮೇಲಿನ ಸಿಟ್ಟು ಅವ್ವನಿಗೆ ಕಡಿಮೆಯಾಗಲಿಲ್ಲ. ಆದರೂ, ತನ್ನ ಕರ್ತವ್ಯವೆಂದು ತಾತನನ್ನು ತನ್ನ ಜೊತೆ ಇಟ್ಟುಕೊಂಡಳು. ಎಂದೂ ನೇರವಾಗಿ ಮುಖ ನೋಡದೆ ತಾತನ ಸೇವೆ ಮಾಡಿದಳು. ನಾದಿನಿಯರ ಬಾಣಂತನ ಮಾಡಿದಳು. ತಾತ ಶಕ್ತಿ ಇರುವವರೆಗೆ ಕುರಿ ಮೇಯಿಸುತ್ತಿದ್ದ. ತಾತ ಸತ್ತ ನಂತರ ಶಾಲೆ ಬಿಟ್ಟ ಅಣ್ಣ ಕುರಿ ಕಾಯಕಕ್ಕೆ ನೇಮಕಗೊಂಡ.

ಮದುವೆಯಾದಾಗಿನಿಂದ ಸುಮಾರು ಅರವತ್ತೈದು ವರ್ಷಗಳಿಂದ ಇಲ್ಲಿಯವರೆಗೂ ಅವ್ವ ಅಪ್ಪನನ್ನು ಹೆಚ್ಚೆಂದರೆ ಒಟ್ಟಾರೆ ಇಪ್ಪತ್ತು ದಿನ ಬಿಟ್ಟಿರಬಹುದೇನೋ. ಒಂದು ದಿನವೂ ಅಪ್ಪನನ್ನು ಬಿಟ್ಟಿರಲಾರಳು. ಅಪ್ಪ ಕೂಡ ಎಲ್ಲೂ ಹೊರಗೆ